# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 7 ಫ್ರಾ.ಸಾ. : 17**

| | | |
|---|---|---|
| ಸಾಕ್ಷಿಯ ಹೆಸರು | : | ರಾಜಶೇಖರ ಗೋವಿಂದಸ್ವಾಮಿ ವನ್ನಿಯರ್ |
| ತಂದೆಯ ಹೆಸರು | : | ಗೋವಿಂದಸ್ವಾಮಿ ವನ್ನಿಯರ್ |
| ವಯಸ್ಸು | : | 38 ವರ್ಷ |
| ಕೆಲಸ | : | ಚಹಾ ಅಂಗಡಿ |
| ವಾಸ | : | ಬೈತ್‌ಕೋಲ್, ಕಾರವಾರ |

**ದಿನಾಂಕಃ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿಃ 16-11-2018 ರಂದು ಕಾರವಾರ ಪೊಲೀಸರು ಪಂಚನಾಮೆಗಾಗಿ ಕಾರವಾರದ ನ್ಯಾಯಾಲಯಕ್ಕೆ ಬರುವಂತೆ ನನಗೆ ನೋಟೀಸ್ ನೀಡಿದ್ದರು. ಅದರಂತೆ ನಾನು ನ್ಯಾಯಾಲಯಕ್ಕೆ ಬಂದಿದ್ದು, ಆ ಸಮಯದಲ್ಲಿ ಚಾಸಾ-4 ಅರುಣ ರವರೂ ಸಹ ಬಂದಿರುತ್ತಾರೆ. ಅಲ್ಲಿ ಸರೋಜಿನಿ ನಾಯರ್ ರವರು ಹಾಜರಿದ್ದು, ಅವರ ಮಗ ಪ್ರೇಮ್ ನಾಯರ ರವರ ಕೊಲೆಯಾಗಿದೆ ಎಂದು ಡಿ.ಎನ್.ಎ ಪರೀಕ್ಷೆಗೆ ರಕ್ತದ ಮಾದರಿಯನ್ನು ಸಂಗ್ರಹಿಸುವ ಸಲುವಾಗಿ ನಮ್ಮನ್ನು ಕರೆಸಿದ್ದರು. ಅಲ್ಲಿ ವೈದ್ಯಾಧಿಕಾರಿಗಳು, ನರ್ಸ್, ಪೊಲೀಸರು, ನ್ಯಾಯಾಧೀಶರು ಮತ್ತು ಸರೋಜಿನಿ ನಾಯರ್ ರವರು ಹಾಜರಿದ್ದು, ಅಲ್ಲಿ ವೈದ್ಯರು ಸರೋಜಿನಿ ನಾಯರ್ ರವರ ರಕ್ತದ ಮಾದರಿಯನ್ನು ಸಂಗ್ರಹಿಸಿರುತ್ತಾರೆ ಹಾಗೂ ಈ ಬಗ್ಗೆ ದಾಖಲೆಗಳಿಗೆ ನಾನು, ಚಾಸಾ-4, ಸರೋಜಿನಿ ನಾಯರ್ ಮತ್ತು ವೈದ್ಯರು ಸಹಿಯನ್ನು ಮಾಡಿರುತ್ತೇವೆ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೊಲೀಸರು ತನಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-48 ಎಂದು, ಸಾಕ್ಷಿಯ ಸಹಿಯನ್ನು ನಿಪಿ-48(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

2. ಪೊಲೀಸರು ನನಗೆ ನೋಟಿಸ್ ನೀಡಿದಾಗ ಆದಿನ ನಾನು ಮನೆಯಲ್ಲಿದ್ದೆ. ಪೊಲೀಸರು ನನಗೆ ಮನೆಗೆ ಬಂದು ನೋಟೀಸ್ ನೀಡಿರುತ್ತಾರೆ. ನೋಟೀಸ್ ನೀಡಲು ಬಂದ ಪೊಲೀಸರ ಹೆಸರು ನನಗೆ ನೆನಪಿಲ್ಲ. ಪೊಲೀಸರು ನನಗೆ ನೋಟೀಸ್ ನೀಡಿದ ಸಮಯ ನನಗೆ ನೆನಪಿಲ್ಲ. ಮೃತ ಪ್ರೇಮ್ ಕುಮಾರ್ ಮತ್ತು ಚಾಸಾ-19 ರಾಜೇಶ್ ರವರು ನನಗೆ ಪರಿಚಯವಿರುತ್ತಾರೆ. ಈ ದಿನ ನಾನು ಚಾಸಾ-19 ರಾಜೇಶ ರವರೊಂದಿಗೆ ಮಾತನಾಡಿರುತ್ತೇನೆ. ಪೊಲೀಸರು ನನಗೆ ಪಂಚನಾಮೆಗೆ ಬರುವಂತೆ ನನಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ಹಾಗೂ ನಿಪಿ-48 ದಾಖಲೆಗಳಿಗೆ ಪೊಲೀಸರು ನನಗೆ ಪೊಲೀಸ್ ಠಾಣೆಯಲ್ಲಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ವೈದ್ಯರು ಡಿ.ಎನ್.ಎ ಪರೀಕ್ಷೆಗಾಗಿ ಯಾವುದೇ ರಕ್ತ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎಸ್.ಎಸ್.ಹೆಚ್. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ